ಪ್ರಮಾಣೀಕರಿಸಲಾದ ದಿನಾಂಕಃ **18.07.2025.**

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಐ. ಆರ್ ಪಿ ವಕೀಲರಿಂದಃ</u>

ನನ್ನ ತಾಯಿ ಓಡಾಡುವ ಸ್ಥಿತಿಯಲ್ಲಿಲ್ಲ, ಅವರಿಗೆ ವಯಸ್ಸಾಗಿದೆ. ಪ್ರತಿವಾದಿ ನನ್ನ ತಾಯಿಯ ತಮ್ಮ. ವಿಭಾಗದ ಆಸ್ತಿ ಸ್ವಾಧೀನ ಪಡೆಯಲು ಈ ದಾವೆ ಹಾಕಿರುತ್ತೇವೆ. 2005 ರಲ್ಲಿ ನನಗೆ ನಿ. ಪಿ. 2 ದಾಖಲೆ ಬಗ್ಗೆ ಗೊತ್ತಾಯಿತು. ನಿ. ಪಿ. 2 ದಾಖಲೆ ಮೊದಲಿಗೆ ನನ್ನ ಬಳಿ ಇರಲಿಲ್ಲ, ನ್ಯಾಯಾಲಯದಿಂದ ಪಡೆದಿರುತ್ತೇನೆ. ವಿರಾಜಪೇಟೆ ನ್ಯಾಯಾಲಯದಲ್ಲಿ ದಾವೆಯಲ್ಲಿ ನಿ.ಪಿ. 2 ಅಸಲು ದಾಖಲೆ ಇದೆ. ನಿ ಪಿ 2 ರಂತೆ ನನ್ನ ತಾಯಿ ಆ ದಾಖಲೆಯಲ್ಲಿ ಪಾಲ್ಗೊಂಡಿಲ್ಲ. ದಾವಾಸ್ತಿಯನ್ನು ಬಿಟ್ಟು ನಿ. ಪಿ. 2 ರಲ್ಲಿ ಯಾವ ಆಸ್ತಿಗಳನ್ನು ಭಾಗ ಮಾಡಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ, ಸ್ವಲ್ಪ ಸ್ವಲ್ಪ ಗೊತ್ತು. ಸರ್ವೆ ನಂ 173/6 ಬಾಣೆ ಜಾಗ ಮತ್ತು ತೋಟ. ಈ ಸರ್ವೆ ನಂಬರ್ ನಲ್ಲಿರುವ ಒಟ್ಟು ಆಸ್ತಿ ಗೊತ್ತಿಲ್ಲ. ಈ ಸರ್ವೆ ನಂಬರ್‌ನ ಆರ್ ಟಿ ಸಿ ನೋಡಿಲ್ಲ. ಈ ಸರ್ವೆ ನಂಬರ್‌ನ ಕಂದಾಯ ದಾಖಲೆಗಳು ನೋಡಿಲ್ಲ. ಗ್ರಾಮ ನಕ್ಷೆಯಲ್ಲಿ ಈ ಸರ್ವೆ ನಂಬರ್ ಇದೆ ಎಂದು ಗೊತ್ತಿಲ್ಲ. ನಾನು 5 ವರ್ಷದ ಹಿಂದೆ ಸರ್ವೆ ನಂ 173/2b GPS ಸರ್ವೆ ಮಾಡಿಸಿರುತ್ತೇನೆ. ದಾವಾಸ್ವತ್ತಿಗೆ GPS ಸರ್ವೆ ಮಾಡಿಸಿಲ್ಲ.

ನನ್ನ ಜಾಗ ಸರ್ವೆ ಮಾಡಿಸುವಾಗ ದಾವಾ ಸ್ವತ್ತು ನನ್ನದು ಎಂದು ಅದು ನನ್ನ ಜಮೀನಿನ ಉತ್ತರಕ್ಕೆ ಇದೆ ಎಂದು ಸರ್ವೆಯರ್ ಹೇಳಿರುತ್ತಾರೆ. ಸರ್ವೆ ನಂ ಚೆಕ್ಕು ಬಂದಿಯನ್ನು ಸರ್ವೆಯರ್ ಹೇಳಿರುತ್ತಾರೆ. ದಾವಾಸ್ತಿಯ ಪಶ್ಚಿಮಕ್ಕೆ ಕಳ್ಳಂಗಡ ಮುದ್ದಪ್ಪನವರ ತೋಟ, ನನ್ನ ಆಸ್ತಿಯ ಉತ್ತರಕ್ಕೆ ದಾವಾಸ್ತಿ ಇದೆ. ದಾವಾಸ್ತಿಯ ದಕ್ಷಿಣಕ್ಕೆ ಪಾಲುಪಾರಿಕತ್ ಆದಾಗ ದಕ್ಷಿಣಕ್ಕೆ ಮಾಡಿರುತ್ತಾರೆ. ದಾವಾಸ್ತಿಯ ಉತ್ತರಕ್ಕೆ ಜನಕರಾಜುರವರ ತೋಟ. ದಾವಾಸ್ತಿಯ ದಕ್ಷಿಣಕ್ಕೆ ನನ್ನ ಸರ್ವೆ ನಂ 173/2 ಬಿ ತೋಟ. ನನ್ನ ತೋಟದಲ್ಲಿ ಕಾಫಿ, ಅಡಿಕೆ, ಬಾಳೆ ಮಾಡಿದ್ದೇನೆ. ದಾವಾಸ್ತಿಯ ಪೂರ್ವಕ್ಕೆ ನೀರು ಹರಿಯುವ ತೋಡು. ದಾವಾಸ್ತಿಯ ಸರ್ವೆ ಆಗ ಮಾಡಲಿಲ್ಲ. ನಾನು 5 ವರ್ಷದ ಹಿಂದೆ ಸರ್ವೆ ನಂ 173/2b GPS ಸರ್ವೆ ಮಾಡಿಸಿರುತ್ತೇನೆ. ದಾವಾಸ್ವತ್ತಿಗೆ GPS ಸರ್ವೆ ಮಾಡಿಸಿಲ್ಲ.

ನನ್ನ ತಾಯಿಯ ಅಣ್ಣ ತಮ್ಮಂದಿರ ಸ್ವಾಧೀನದಲ್ಲಿ ವಿಭಾಗವಾದ ಆಸ್ತಿಯ ದಾವಾಸ್ವತ್ತು ಇದೆ. ನಿ. ಪಿ. 2 ರ ಪತ್ರದಂತೆ ನನ್ನ ತಾಯಿಗೆ ಆಗಲೇ ಸ್ವಾಧೀನ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ವತ್ತು ಪೈಸಾರಿ ಜಾಗ ಎಂದರೆ ಸರಿಯಲ್ಲ. ಸಾಕ್ಷಿಗೆ ದಾವಾಸ್ತಿ ಆರ್

ಟಿ ಸಿ ಅದು ಮೋಸದ ಆರ್ ಟಿ ಸಿ ಎಂದು ಹೇಳುತ್ತಾರೆ. ತೋರಿಸಿದ ಆರ್ ಟಿ ಸಿ ಯಲ್ಲಿ 10 ಎಕರೆ ಸರ್ಕಾರಿ ಜಾಗ ಎಂದರೆ ಸರಿಯಲ್ಲ. ಈ ಉದ್ದೇಶಕ್ಕೆ ಸತ್ಯವನ್ನು ಮರೆಮಾಡಲು ಆರ್ ಟಿ ಸಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ಸರ್ಕಾರಿ ಜಾಗದ ಮೇಲೆ ಅದಿಕಾರ ಇಲ್ಲ ಎಂದರೆ ಸರಿಯಲ್ಲ. ದಾವಾಸ್ತಿ ಪೈಸಾರಿ ಜಾಗ ಎಂದು ನನ್ನ ತಾಯಿಗೆ ಗೊತ್ತಿದ್ದು, ಸಾಕ್ಷ್ಯವನ್ನು ಹೇಳಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ನಿ. ಪಿ. 2 ದಾಖಲೆ ಬರೆದಾಗಲೇ ಗೊತ್ತಿತ್ತು ಎಂದರೆ ಸರಿಯಲ್ಲ. ನನಗೆ ದಾವಾಸ್ತಿಯ ನಿ. ಪಿ. 2 ಬಗ್ಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ಯಾವುದೇ ಅನಾರೋಗ್ಯ ಇಲ್ಲ ಆದರೂ ಕೂಡ ನ್ಯಾಯಾಲಯದಲ್ಲಿ ಸಾಕ್ಷ್ಯವನ್ನು ಹೇಳಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/xxx-**

ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.